<u>ಕರ್ನಾಟಕ ಲೋಕಾಯುಕ್ತ</u>

**ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6500/2014/ಪಿಪಿ**

**ಬಹುಮಹಡಿಗಳ ಕಟ್ಟಡ,**
**ಡಾ:ಅಂಬೇಡ್ಕರ್ ವೀಧಿ,**
**ಬೆಂಗಳೂರು.**
**ದಿನಾಂಕ : 17/03/2017**

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಪ್ರಶಾಂತ್ ತೊಟ್ಟಂ, ಅಂಬೇಡ್ಕರ್ ನಗರ, ತೊಟ್ಟಂ, ಕೊಡವೂರು ಗ್ರಾಮ, ವಡಭಾಂಡೇಶ್ವರ ವಾರ್ಡ್, ತೊಟ್ಟಂ ಅಂಚೆ, ಉಡುಪಿ ತಾಲ್ಲೂಕು ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

ಪ್ರಕರಣದ ದೂರುದಾರರಾದ ಶ್ರೀ ಪ್ರಶಾಂತ್ ತೊಟ್ಟಂ ಇವರು ಉಡುಪಿ ಜಿಲ್ಲೆಯ ಗೌರವಾನ್ವಿತ ಉಪಲೋಕಾಯುಕ್ತರ ದೂರು ಸ್ವೀಕಾರ ಕ್ಯಾಂಪ್‌ನಲ್ಲಿ ಶ್ರೀ ಶ್ರೀಕಾಂತ್‌ರಾವ್, ಪೌರಾಯುಕ್ತರು, ನಗರಸಭೆ, ಉಡುಪಿ ಹಾಗೂ ಶ್ರೀಮತಿ ಸಂಧ್ಯಾ ಕುಮಾರಿ, ನಗರಸಭಾ ಸದಸ್ಯರು, ವಡಭಾಂಡೇಶ್ವರ ವಾರ್ಡ್ ಉಡುಪಿ ಇವರುಗಳ ವಿರುದ್ಧ ದೂರೊಂದನ್ನು ಸಲ್ಲಿಸಿ, ಎದುರುದಾರರುಗಳು ಉಡುಪಿ ನಗರ ಸಭಾ ವ್ಯಾಪ್ತಿಯ ವಡಭಾಂಡೇಶ್ವರ ವಾರ್ಡ್‌ನ ಅಂಬೇಡ್ಕರ್ ನಗರದ ಮಣ್ಣಿನ ರಸ್ತೆಯನ್ನು ನಗರಸಭೆಯಲ್ಲಿ ತೀರ್ಮಾನಿಸಿದಂತೆ ನಿರ್ವಹಿಸದೇ ಬೇರೆ ಕಡೆಗೆ ಕಾಮಗಾರಿಯನ್ನು ಸ್ಥಳಾಂತರಿಸಿರುತ್ತಾರೆ. ಆದ್ದರಿಂದ, ಅಂಬೇಡ್ಕರ್ ನಗರದವರು ಕಾಂಕ್ರೀಟ್ ರಸ್ತೆಯಿಂದ ವಂಚಿತರಾಗಿರುತ್ತಾರೆಂದು, ಈ ಕಾರಣಕ್ಕೆ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಪೌರಾಯುಕ್ತರಾದ ಶ್ರೀ ಶ್ರೀಕಾಂತ್‌ರಾವ್‌ರವರು ಸದರಿ ದೂರಿನ ಬಗ್ಗೆ ನಗರಸಭೆಯ ಸಮಿತಿಯಲ್ಲಿ ಚರ್ಚಿಸಿ ಅನುಮೋದನೆ ಪಡೆದುಕೊಂಡ ನಂತರ ದೂರುದಾರರ ಕೋರಿಕೆಯಂತೆ ಕ್ರಮ ಕೈಗೊಂಡು ಒಂದು ತಿಂಗಳ ಒಳಗಾಗಿ ವರದಿಯನ್ನು ಸಲ್ಲಿಸುವುದಾಗಿ ಗೌರವಾನ್ವಿತರಲ್ಲಿ ಮುಚ್ಚಳಿಕೆಯ ಪತ್ರವನ್ನು ಸಲ್ಲಿಸಿದ್ದರು. ನಂತರ ದಿ:07/11/2014 ರಂದು ಒಂದು ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ 2013-14ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನ ಶೇ. 22.75ರ ನಿಧಿ ಅಡಿಯಲ್ಲಿ ವಡಭಾಂಡೇಶ್ವರ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ನಗರದಲ್ಲಿರುವ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಕಾಮಗಾರಿಯ

ಕ್ರಿಯಾ ಯೋಜನೆಯನ್ನು ಅಳವಡಿಸಿಕೊಳ್ಳಲಾಗಿದ್ದು, ಸದರಿ ಕ್ರಿಯಾ ಯೋಜನೆಗೆ ದಿ:20/08/2013 ರಂದು ಆಡಳಿತಾಧಿಕಾರಿ ಸಭೆಯ ನಿರ್ಣಯ ಸಂಖ್ಯೆ:995 ರಲ್ಲಿ ಅಂಗೀಕರಿಸಲಾಗಿದೆ. ಮಾನ್ಯ ಜಿಲ್ಲಾಧಿಕಾರಿಗಳ ನಡುವಳಿ ಸಂಖ್ಯೆ: ಜಿನಕೋ–3/ಸಿಆರ್–9/ಶೇ.22.75ಎಸ್‌ಎಫ್‌ಸಿ/2013–14(ಸಿನಂ.71389) ದಿ:08/10/2013 ರಂದು ಮಾನ್ಯ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿರುತ್ತಾರೆ. ತದನಂತರ ನಗರಸಭೆಗೆ ನೂತನ ಆಡಳಿತ ಮಂಡಳಿ ಚುನಾಯಿತರಾಗಿ ಬಂದಿದ್ದು, ಸಂಬಂಧಿಸಿದ ವಡಭಾಂಡೇಶ್ವರ ವಾರ್ಡ್‌ನ ಸದಸ್ಯರಾದ ಶ್ರೀಮತಿ ಸಂಧ್ಯಾ ಕುಮಾರಿ ರವರು ದಿ:22/05/2014 ರಂದು ಈ ಹಿಂದೆ ಕೈಗೆತ್ತಿಕೊಳ್ಳಲಾದ ಕಾಮಗಾರಿಯು ಅಗತ್ಯತೆ ಇಲ್ಲದೇ ಇರುವುದರಿಂದ, ಸದರಿ ಕಾಮಗಾರಿಯ ಬದಲಿಗೆ ಅದೇ ವಾರ್ಡಿನ ಮಂಜುನಾಥೇಶ್ವರ ಮಂದಿರದ ಎದುರಿನ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಬಗ್ಗೆ ಬದಲಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಅದರಂತೆ, ದಿ:31/05/2014ರ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ: 49 ರಂತೆ ಬದಲಿ ಕಾಮಗಾರಿ ಪ್ರಸ್ತಾವನೆಗೆ ಅನುಮೋದನೆ ಪಡೆಯಲಾಗಿರುತ್ತದೆ. ನಂತರದಲ್ಲಿ ದೂರುದಾರರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗ, ಬೆಂಗಳೂರುರವರಿಗೆ ದೂರು ಸಲ್ಲಿಸಿರುವ ಮೇರೆಗೆ, ಸದರಿ ಆಯೋಗವು ಮಾನ್ಯ ಜಿಲ್ಲಾಧಿಕಾರಿಗಳಿಂದ ಮಾಹಿತಿ ಕೋರಿದ್ದು, ಅದರಂತೆ, ಪತ್ರ ಸಂ:ಉನಸ/ಶೇ.22.75/ಸಿಆರ್/2014–15, ದಿ:10/07/2014 ಮತ್ತು 23/07/2014 ರಂತೆ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಇವರ ಮುಖಾಂತರ ದೂರುದಾರರಿಗೆ ಸಲ್ಲಿಸಲಾಗಿರುತ್ತದೆ. ಹಿಂದಿನ ಕಾಮಗಾರಿಗಿಂತ ವಡಭಾಂಡೇಶ್ವರ ವಾರ್ಡ್‌ನ ಶ್ರೀ ಮಂಜುನಾಥೇಶ್ವರ ಮಂದಿರದ ಎದುರಿನ ರಸ್ತೆಯ ಕಾಮಗಾರಿಯ ಆದ್ಯತೆ ಹೆಚ್ಚಿದ್ದು, ಆದ್ದರಿಂದ, ಅದೇ ವಡಭಾಂಡೇಶ್ವರ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ನಗರದಲ್ಲಿರುವ ರಸ್ತೆಯ ಕಾಮಗಾರಿಯನ್ನು ಕೈಬಿಡಲಾಗಿರುತ್ತದೆ. ಆದರೆ, ಕೈಬಿಡಲಾಗಿರುವ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುವುದೆಂದು ತೀರ್ಮಾನಿಸಲಾಗಿರುತ್ತದೆ. ಈ ಬಗ್ಗೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗ, ಬೆಂಗಳೂರು ಇವರಿಗೆ ವರದಿಯನ್ನು ನೀಡಿದ್ದು, ಅದರ ಪ್ರತಿಯನ್ನು ಹಾಜರುಪಡಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಸದರಿ ಅನುಪಾಲನಾ ವರದಿಯ ಪ್ರತಿಯನ್ನು ದೂರುದಾರರಿಗೆ ರವಾನಿಸಿ ಅವರಿಂದ ಪ್ರತ್ಯುತ್ತರವನ್ನು ಕರೆಯಲಾಗಿದ್ದು, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿರುವುದಿಲ್ಲ.

3. ದೂರಿನಂಶಗಳನ್ನು, ಎದುರುದಾರರು ಸಲ್ಲಿಸಿರುವ ಅನುಪಾಲನಾ ವರದಿಯನ್ನು ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ ಮೇಲೆ ತಿಳಿಸಿದಂತೆ ಯೋಜನಾ ನಿರ್ದೇಶಕರು,

ಜಿಲ್ಲಾ ನಗರಾಭಿವೃದ್ಧಿ ಕೋಶ, ಉಡುಪಿ ಜಿಲ್ಲೆ, ಉಡುಪಿ ಇವರಿಗೆ ದಿ:10/07/2014 ರಂದು ಪೌರಾಯುಕ್ತರು, ಉಡುಪಿ ನಗರಸಭೆ ಇವರು ಪತ್ರ ಬರೆದಿದ್ದು, ಸದರಿ ಪತ್ರದಲ್ಲಿ ದೂರುದಾರರ ಮನೆಯನ್ನು ಪರಿಶೀಲಿಸಲಾಗಿ, ವಡಭಾಂಡೇಶ್ವರ ವಾರ್ಡ್‌ನ ಅಂಬೇಡ್ಕರ್ ನಗರದಲ್ಲಿರುವ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಕಾಮಗಾರಿಯನ್ನು 2013–14ನೇ ಸಾಲಿನಲ್ಲಿ ತೆಗೆದುಕೊಳ್ಳಲಾಗಿದ್ದು, ಸದರಿ ವಾರ್ಡ್‌ನ ಸದಸ್ಯರ ಕೋರಿಕೆಯಂತೆ ಅದೇ ವಾರ್ಡನ ಶ್ರೀ ಮಂಜುನಾಥೇಶ್ವರ ಮಂದಿರದ ಎದುರಿನ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಲು ದಿ:31/05/2014ರ ಸಾಮಾನ್ಯ ಸಭೆಯಲ್ಲಿ ನಿರ್ಣಯ ಸಂಖ್ಯೆ:49ರಂತೆ ತೀರ್ಮಾನಿಸಲಾಗಿರುತ್ತದೆ. ಅದರಂತೆ, ಮಾನ್ಯ ಜಿಲ್ಲಾಧಿಕಾರಿಗಳಿಗೆ ಮಂಜೂರಾತಿಗಾಗಿ ದಿ:24/06/2014 ರಂದು ಸಲ್ಲಿಸಲಾಗಿರುತ್ತದೆ. ಹಾಗೂ ಮುಂದೆ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಕೈಬಿಟ್ಟ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ). ಹಾಗೆಯೇ ಸದರಿ ಮಾಹಿತಿಯನ್ನು ಕಾರ್ಯದರ್ಶಿ/ಅಧಿಕೃತಗೊಳಿಸಲಾದ ಅಧಿಕಾರಿ, ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಆಯೋಗ, ಬೆಂಗಳೂರು ಇವರಿಗೆ ಪತ್ರ ಬರೆದು ತಿಳಿಸಿರುವುದು ಕಂಡು ಬರುತ್ತದೆ. (ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ).

4. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಉಡುಪಿಯ ನಗರಸಭಾ ವ್ಯಾಪ್ತಿಯ ಶ್ರೀ ವಡಭಾಂಡೇಶ್ವರ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ಕಾಲೋನಿಯಲ್ಲಿರುವ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಬಗ್ಗೆ 2013–14ನೇ ಸಾಲಿನಲ್ಲಿ ನಗರಸಭಾ ವತಿಯಿಂದ ತೀರ್ಮಾನಕ್ಕೈಗೊಳ್ಳಲಾಗಿದ್ದು, ಅದಕ್ಕೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿಯಿಂದ ಅನುಮತಿಯನ್ನು ನೀಡಲಾಗಿರುತ್ತದೆ. ವಡಭಾಂಡೇಶ್ವರ ವಾರ್ಡ್‌ನ ಹೊಸ ಆಡಳಿತ ಮಂಡಳಿಯ ಚುನಾಯಿತ ಸದಸ್ಯರಿಂದ ಬಂದ ಕೋರಿಕೆಯ ಮೇರೆಗೆ ವಡಭಾಂಡೇಶ್ವರ ವಾರ್ಡ್‌ನ ಶ್ರೀ ಮಂಜುನಾಥೇಶ್ವರ ದೇವಸ್ಥಾನದ ಎದುರಿನ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಬಗ್ಗೆ ತೀರ್ಮಾನಿಸಿ ಅದೇ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ನಗರದಲ್ಲಿರುವ ರಸ್ತೆಯನ್ನು ಕಾಂಕ್ರೀಟೀಗೊಳಿಸುವ ಕಾಮಗಾರಿಯನ್ನು ಕೈಬಿಡಲಾಗಿರುತ್ತದೆಂದು, ಆದರೆ, ಸದರಿ ರಸ್ತೆಯ ಕಾಮಗಾರಿಯನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುವುದೆಂದು ಎದುರುದಾರರು ತಿಳಿಸಿರುವುದು ಕಂಡು ಬರುತ್ತದೆ. ಈ ಬಗ್ಗೆ ಎದುರುದಾರರು ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳ ಆಯೋಗಕ್ಕೆ ಮಾಹಿತಿಯನ್ನು ಸಲ್ಲಿಸಿರುವ ಬಗ್ಗೆ ಕಂಡು ಬಂದಿರುತ್ತದೆ. ಆದ್ದರಿಂದ, ಸದರಿ ವಡಭಾಂಡೇಶ್ವರ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ನಗರದಲ್ಲಿನ ರಸ್ತೆಗಿಂತ ಅದೇ ವಾರ್ಡನ್ ಶ್ರೀ ಮಂಜುನಾಥೇಶ್ವರ ದೇವಾಲಯ ಎದುರಿನ

ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಬಗ್ಗೆ ಹೆಚ್ಚು ಆದ್ಯತೆ ಇರುವುದನ್ನು ಪರಿಗಣಿಸಿ ಉಡುಪಿ ನಗರಸಭೆಯಲ್ಲಿ ಠರಾವು ಪಾಸ್ ಮಾಡಿದ್ದು, ಸದರಿ ಠರಾವಿನ ಪ್ರತಿಯನ್ನು ಹಾಜರುಪಡಿಸಲಾಗಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ದೂರುದಾರರು ತಿಳಿಸಿರುವಂತೆ ವಡಭಾಂಡೇಶ್ವರ ವಾರ್ಡ್‌ನ ತೊಟ್ಟಂ ಅಂಬೇಡ್ಕರ್ ನಗರದಲ್ಲಿರುವ ರಸ್ತೆಯ ಕಾಮಗಾರಿಯನ್ನು ಮೊದಲು ಮಂಜೂರು ಮಾಡಿ ನಂತರ ಅದೇ ವಾರ್ಡ್‌ನ ಶ್ರೀ ಮಂಜುನಾಥೇಶ್ವರ ದೇವಾಲಯದ ಎದುರಿನ ರಸ್ತೆಯನ್ನು ಆದ್ಯತೆಯ ಮೇರೆಗೆ ಕಾಂಕ್ರೀಟೀಕರಣಗೊಳಿಸಲು ತೀರ್ಮಾನಿಸಿರುವುದು ಸ್ಪಷ್ಟ ಪಟ್ಟಿರುತ್ತದೆ. ಸದರಿ ತೀರ್ಮಾನದಲ್ಲಿ ಯಾವ ಕಾರಣಕ್ಕಾಗಿ ಮತ್ತು ಯಾವ ಆಧಾರದ ಮೇಲೆ ಕಾಮಗಾರಿಯ ಆದ್ಯತೆಯನ್ನು ನಿಗದಿಪಡಿಸಲಾಗಿದೆ ಎಂಬುದರ ಬಗ್ಗೆ ಎಲ್ಲೂ ಉಲ್ಲೇಖವಿರುವುದಿಲ್ಲ. ಹಾಗೂ ಪೌರಾಯುಕ್ತರಾದ 1ನೇ ಎದುರುದಾರರು ಸಹ ತಮ್ಮ ಆಕ್ಷೇಪಣೆಯಲ್ಲಿ ಎಲ್ಲೂ ತಿಳಿಸಿರುವುದಿಲ್ಲ. ಆದ್ದರಿಂದ, ದೂರುದಾರರು ತಿಳಿಸಿರುವಂತೆ ತೊಟ್ಟಂ ಅಂಬೇಡ್ಕರ್ ನಗರದ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸುವ ಬಗ್ಗೆ ಟೆಂಡರ್ ಅನ್ನು ಕರೆಯಲಾಗಿತ್ತೆಂದು ತೋರಿಸಲು ಟೆಂಡರ್ ಪ್ರಕ್ರಿಯೆ ಪ್ರತಿಯನ್ನು ಹಾಜರುಪಡಿಸಿದ್ದು, ಆದರೆ, ಸದರಿ ಅಂಬೇಡ್ಕರ್ ನಗರದ ರಸ್ತೆಯ ಕಾಮಗಾರಿಯನ್ನು ಕೈಬಿಡಲು ಹಾಗೂ ಶ್ರೀ ಮಂಜುನಾಥೇಶ್ವರ ದೇವಾಲಯದ ಎದುರಿನ ರಸ್ತೆಯನ್ನು ಡಾಂಬರೀಕರಣಗೊಳಿಸಲು ಇರುವ ಆದ್ಯತೆಯ ಬಗ್ಗೆ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ನಗರಸಭಾ ವ್ಯಾಪ್ತಿಯ ವಡಭಾಂಡೇಶ್ವರ ವಾರ್ಡ್‌ನಲ್ಲಿ ತೊಟ್ಟಂ ಡಾ.ಅಂಬೇಡ್ಕರ್‌ನಗರದಲ್ಲಿನ ರಸ್ತೆಯನ್ನು ಕಾಂಕ್ರೀಟೀಕರಣಗೊಳಿಸಲು ಅವಶ್ಯಕತೆ ಇರುವುದು ಕಂಡು ಬರುವುದರಿಂದ, ಆದ್ಯತೆಯ ಮೇರೆಗೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 13/3/17.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**

13/3/17